ದಿನಾಂಕಃ 25-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಟಿ.ಎನ್.ಪಿ. ವಕೀಲರಿಂದಃ**

13. ಆರೋಪಿಗಳು ನನ್ನನ್ನು ಎಳೆದಾಡಿದ ಕಾರಣಕ್ಕೆ ನನ್ನ ಬಟ್ಟೆ ಹರಿದಿತ್ತು, ಅದನ್ನು ನಾನು ಪೊಲೀಸರಿಗೆ ಕೊಟ್ಟಿಲ್ಲ. ಘಟನಾ ಸ್ಥಳ ಹಿರೇಮಠ ಅವರ ಜಮೀನು ಎಂದು ನನಗೆ ನನ್ನ ತಮ್ಮ ಹೇಳಿದ್ದಕ್ಕೆ ಗೊತ್ತಿದೆ. ಕಿತ್ತೂರನಿಂದ ಬೈಲೂರಿಗೆ ಹೋಗಬೇಕಾದರೆ ಮೊದಲು ಸೈನಿಕ ಶಾಲೆ ಬರುತ್ತದೆ ಎಂದರೆ ನಿಜ. ಸೈನಿಕ ಶಾಲೆ ಆದ ನಂತರ ಒಂದು ಯು ಟರ್ನ ಇದೆ ಎಂದರೆ ಸರಿ. ಸದರಿ ಶಾಲೆ ದಾಟಿದ ನಂತರ ಬೀಡಿ ವರೆಗೂ ರಸ್ತೆಯ ಎರಡೂ ಬದಿಗಳಲ್ಲಿ ಸಾಕಷ್ಟು ಮರಗಳು ಇವೆ ಎಂದರೆ ನಿಜ. ಸದರಿ ಶಾಲೆ ದಾಟಿದ ನಂತರ ಜಂಗಲ್ ಏರಿಯಾ ಇದೆ ಎಂದರೆ ಸರಿ. ಸಂಜೆ 6-30 ಮತ್ತು 7.00 ರ ನಂತರ ಎಲ್ಲಾ ಕತ್ತಲು ಇರುತ್ತದೆ ಎಂದರೆ ಸರಿ.

14. ಘಟನಾ ಸ್ಥಳದ ಹತ್ತಿರ ಎಲ್ಲಿಯೂ ಲೈಟ ಕಂಬಗಳು ಇಲ್ಲ ಎಂದರೆ ಸರಿ. ಹಿರೇಮಠ ಅವರ ಜಮೀನು ಇರುವ ಸ್ಥಳದಲ್ಲಿ ಸಂಜೆ ಯಾರೂ ಓಡಾಡುವುದಿಲ್ಲ ಎಂದರೆ ಸಾಕ್ಷಿ ಬೈಕ್ ಮೇಲೆ, ಕಾರ ಮೇಲೆ ಜನ ಬೇರೆ ಊರಿಗೆ ಹೋಗುವವರು ದಾರಿ ಮೇಲೆ ಹೋಗುತ್ತಾರೆ ಎಂದು ನುಡಿಯುತ್ತಾರೆ. ಹಿರೇಮಠ ಅವರ ಜಮೀನು ಹೊರತುಪಡಿಸಿ ಅಕ್ಕಪಕ್ಕದಲ್ಲಿ ಬೇರೆ ಜಮೀನು ಮತ್ತು ಮನೆಗಳು ಇವೆ ಎಂದರೆ ಸರಿ. ಅವುಗಳು ಯಾರಿಗೆ ಸೇರಿದ ಜಮೀನು ಮತ್ತು ಯಾರ ಮನೆಗಳು ಅಂತಾ ನನಗೆ ಗೊತ್ತಿಲ್ಲ.

15. ಘಟನಾ ಸ್ಥಳದಲ್ಲಿ ಹಿರೇಮಠ ಅವರ ಜಮೀನು ಇದ್ದ ಬಗ್ಗೆ ಮಾತ್ರ ಗೊತ್ತು, ಮನೆ ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ಸಾಮಾನ್ಯವಾದ ವೇಗದಲ್ಲಿ ನನ್ನ ತಮ್ಮ ಬೈಕ ಚಲಾಯಿಸುತ್ತಿದ್ದ. ನನ್ನ ತಮ್ಮ ಅತೀವೇಗವಾಗಿ ಬೈಕ ಚಲಾಯಿಸಿಕೊಂಡು ಹೋಗುತ್ತಿದ್ದ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಬೈಕನ್ನು ವೇಗವಾಗಿ ಚಲಾಯಿಸಿಕೊಂಡು ಹೋಗುತ್ತಿದ್ದರೆ ಯಾರಾದರೂ ಕೈ ಮಾಡಿದ್ದಲ್ಲಿ ನಿಲ್ಲಿಸುವುದು ಕಷ್ಟಸಾಧ್ಯ ಎಂದರೆ ಸರಿ. ರಾತ್ರಿ ಆಗಿದ್ದರಿಂದ ಬೈಕನ್ನು ನಿಲ್ಲಿಸುವುದು ಬೇಡ, ಹೋಗಿ ಬಿಡೋಣ ಅಂತಾ ನನ್ನ ತಮ್ಮನಿಗೆ ಹೇಳಲು ಏನಾದರೂ ತೊಂದರೆ ಇತ್ತಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

16. ಆ ರೀತಿ ಕೈ ಮಾಡಿ ಗಾಡಿಯನ್ನು ನಿಲ್ಲಿಸಲು ಹೇಳಿದ ವ್ಯಕ್ತಿಗಳ ಕೈಯಲ್ಲಿ ಚಾಕು ಇತ್ತು, ಸದರಿ ಚಾಕು ಯಾರು ಹಿಡಿದಿದ್ದರು ಅಂತಾ ನಿಖರವಾಗಿ ಹೇಳಲು ಸಾಧ್ಯವಿಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದಿದ್ದಾರೆ. ಹೇಳಿಕೆ ಕೊಡುವ ಕಾಲಕ್ಕೆ ಆರೋಪಿಗಳು ಗಾಡಿ ನಿಲ್ಲಿಸಲು ಹೇಳಿದಾಗ ಕೈಯಲ್ಲಿ ಚಾಕು ಇತ್ತು ಅಂತಾ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿ. ಅದೇ ರೀತಿ ನನ್ನ ಮುಖ್ಯ ವಿಚಾರಣೆ ಸಾಕ್ಷಿ ಕಾಲಕ್ಕೂ ಸದರಿ ವ್ಯಕ್ತಿಗಳ ಕೈಯಲ್ಲಿ ಚಾಕು ಇತ್ತು ಅಂತಾ ಹೇಳಿಲ್ಲ ಎಂದರೆ ಸರಿ. ಒಬ್ಬ ವ್ಯಕ್ತಿ ಕೈಯಲ್ಲಿ ಚಾಕು ಇತ್ತು ಅಂತಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಕು ಹೊರತುಪಡಿಸಿ ಬೇರೆಯವರ ಕೈಯಲ್ಲಿ ಬೇರೆ ಯಾವುದೇ ಆಯುಧಗಳು ಇದ್ದ ಬಗ್ಗೆ ನಾನು ಗಮನಿಸಿಲ್ಲ.

17. ಸದರಿ ದಿನ ನನ್ನ ಬಳಿ ರೂ.4,000/- ನಗದು ಹಣ ಇತ್ತು, ನನ್ನ ತಮ್ಮನ ಬಳಿ ಹಣ ಇರಲಿಲ್ಲ. ನನ್ನ ಬಳಿ ಇದ್ದ ರೂ.4,000/- ಹಣವನ್ನೂ ಸಹ ಆ ವ್ಯಕ್ತಿಗಳು ಕಸಿದುಕೊಂಡಿರುತ್ತಾರೆ. ಸದರಿ ವಿಷಯವನ್ನು ನಾನು ಹೇಳಿಕೆ ಕೊಡುವ ಕಾಲಕ್ಕೆ ಹೇಳಿದ್ದೇನೆ. ನನ್ನ ಮುಖ್ಯ ವಿಚಾರಣೆ ಕಾಲಕ್ಕೆ ರೂ.4,000/- ಹಣದ ಬಗ್ಗೆ ಹೇಳಿಲ್ಲ ಎಂದರೆ ಸರಿ. ನನ್ನ ಬಳಿ ರೂ.4,000/- ಹಣ ಇತ್ತು, ಅದನ್ನು ಅವರು ಕಸಿದುಕೊಂಡರು ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

18. ಸದರಿ ದಿನ ಆರೋಪಿಗಳು ಯಾವ ಬಣ್ಣದ ಶರ್ಟ ಮತ್ತು ಪ್ಯಾಂಟ ಹಾಕಿದ್ದರು ಅಂತಾ ನಿಖರವಾಗಿ ಹೇಳಲು ಆಗುವುದಿಲ್ಲ. ಆರೋಪಿತರು ಅವರಲ್ಲಿ ಕನ್ನಡದಲ್ಲಿ ಏನು ಮಾತನಾಡುತ್ತಿದ್ದರು ಎಂದು ನನಗೆ ಹೇಳಲು ಆಗುವುದಿಲ್ಲ. ಸದರಿ ಘಟನೆ ರಾತ್ರಿ ಸಮಯದಲ್ಲಿ ಆದ ಕಾರಣ ಯಾವ ವ್ಯಕ್ತಿ ಮೋಬೈಲ ಕಸಿದುಕೊಂಡರು, ಯಾವ ವ್ಯಕ್ತಿ ಚೈನ್ ಕಸಿದುಕೊಂಡು ಅಂತಾ ಮತ್ತು ಯಾವ ವ್ಯಕ್ತಿ ಹಣ ಕಸಿದುಕೊಂಡು ಅಂತಾ ನಿಖರವಾಗಿ ಹೇಳಲು ಆಗುವುದಿಲ್ಲ.

19. ನನ್ನದು "ರಿಯಲ್ ಮಿ" ಮೊಬೈಲ ಇತ್ತು. ಸದರಿ ಮೋಬೈಲ ಯಾವಾಗ ಖರೀದಿಸಿದ್ದೇನೆ ನನಗೆ ನೆನಪಿಲ್ಲ. ಅದರ ಬೆಲೆ ರೂ.7,000/- ದಿಂದ ರೂ.8,000/- ಇದೆ ಮತ್ತು ಅದು ನನ್ನ ಹೆಸರಿನಲ್ಲಿ ಇದೆ. ಸದರಿ ಮೊಬೈಲ ಬಿಲ್ಲನ್ನು ಪೊಲೀಸರಿಗೆ ಕೊಟ್ಟಿದ್ದೀರಾ ಎಂದರೆ ನನ್ನ ತಮ್ಮ ಕೊಟ್ಟಿರಬಹುದು, ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಮೊಬೈಲ ಬಿಡಿಸಿಕೊಳ್ಳಲು ನ್ಯಾಯಾಲಯದ ಮುಂದೆ

ನನ್ನ ತಮ್ಮ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಮೊಬೈಲ ನನ್ನದು, ಅದನ್ನು ಬಿಡಿಸಲು ಕೊರ್ಟನಲ್ಲಿ ನಾನು ಸ್ವತಃ ಅರ್ಜಿ ಸಲ್ಲಿಸಿಲ್ಲ. ಅದೇ ರೀತಿ ನನ್ನ ತಮ್ಮನಿಗೆ ನನ್ನ ಮೋಬೈಲ ಬಿಡಿಸಿಕೊಳ್ಳಲು ಜಿಪಿಎ ನ್ನು ನಾನು ಕೊಟ್ಟಿಲ್ಲ. ಸದರಿ ಮೊಬೈಲ ನನ್ನದು ಅಂತಾ ತೋರಿಸಲು ಕೋರ್ಟನಲ್ಲಿ ಆಗಲೀ, ಪೂಲೀಸರ ಮುಂದೆ ಆಗಲೀ ಯಾವುದೇ ದಾಖಲೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

20. ಬಂಗಾರದ ಚೈನ್ 10 ಗ್ರಾಂ ಇದೆ. 10 ಗ್ರಾಂ ನ ಚೈನ ಅಂದರೆ ಅದು ದಪ್ಪವಾಗಿರುವುದಿಲ್ಲ ಎಂದರೆ ಸರಿ. ಕೊರಳಿಗೆ ಹಾಕಿ ಜಗ್ಗಾಡಿದರೆ ಸದರಿ ಚೈನ ಕಿತ್ತು ಹೋಗುತ್ತೆ ಎಂದರೆ ಸರಿ. ಸದರಿ ಚೈನ್ ನನ್ನ ತಮ್ಮ ನದ್ದು ಅಂತಾ ತೋರಿಸಲು ಕೋರ್ಟನಲ್ಲಿ ಆಗಲೀ, ಪೂಲೀಸರ ಮುಂದೆ ಆಗಲೀ ಯಾವುದೇ ದಾಖಲೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

21. ನನ್ನದು ವಿವಾಹ ಆಗಿದೆ. ನನ್ನ ಗಂಡನ ಮನೆ ಎಂ.ಕೆ.ಹುಬ್ಬಳ್ಳಿ ಯಲ್ಲಿ ಇರುತ್ತದೆ. ಬೈಲೂರನಲ್ಲಿ ನಮ್ಮ ಮನೆ ಇರುವುದರಿಂದ ನಾನು ಅಲ್ಲೇ ವಾಸ ಮಾಡುತ್ತೇನೆ. ನನ್ನ ತಮ್ಮ ನನ್ನ ತಂದೆ ತಾಯಿಗೆ ಒಬ್ಬನೇ ಮಗ ಎಂದರೆ ಸಾಕ್ಷಿ ಇನ್ನೊಬ್ಬ ಮೃತಪಟ್ಟಿರುತ್ತಾನೆ ಎಂದು ನುಡಿಯುತ್ತಾರೆ. ನಮ್ಮ ಕುಟುಂಬಕ್ಕೆ ಸಂಬಂಧಪಟ್ಟಂತೆ ಬೈಲೂರು ಮತ್ತು ಖೋದಾನಪುರದಲ್ಲಿ ಸಾಕಷ್ಟು ಜಮೀನು ಇದೆ ಎಂದರೆ ಸರಿ. ನಮ್ಮ ತಂದೆ ತಾಯಿಗೆ ಒಬ್ಬನೇ ಮಗ ಇರುವುದರಿಂದ ನನ್ನ ತಮ್ಮ ಐಷಾರಾಮಿ ಜೀವನ ನಡೆಸುತ್ತಾನೆ ಎಂದರೆ ಸರಿ. ನನ್ನ ತಮ್ಮ ಮಧ್ಯ ಸೇವನೆ ಮಾಡುತ್ತಾನೆ ಎಂದರೆ ಮೊದಲು ಮಾಡುತ್ತಿದ್ದ ಎಂದು

ನುಡಿಯುತ್ತಾರೆ. ನನ್ನ ತಮ್ಮನಿಗೆ ಜೂಜು ಆಡುವ ಅಭ್ಯಾಸ ಇದೆ ಎಂದರೆ ಸರಿಯಲ್ಲ. ಈ ಎಲ್ಲಾ ದುಶ್ಚಟಗಳು ಇರುವ ಕಾರಣ ಅವನಿಗೆ ಸಾಕಷ್ಟು ವೈರಿಗಳು ಇದ್ದಾರೆ ಎಂದರೆ ಸರಿಯಲ್ಲ. ನನ್ನ ತಮ್ಮನಿಗೆ ಸಾಕಷ್ಟು ವೈರಿಗಳು ಇದ್ದ ಕಾರಣ ಬೇರೆ ಯಾರೋ ಮಾಡಿದ ಕೃತ್ಯಕ್ಕೆಚಿ ಪೊಲೀಸರ ಮಾತು ಕೇಳಿ ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

22. ಕಿತ್ತೂರ ಪೊಲೀಸ ಠಾಣೆಯಲ್ಲಿ ಇರುವ ಚೇತನ ಬದನಿ ಎನ್ನುವ ಸಿಬ್ಬಂದಿ ನನ್ನ ತಮ್ಮನ ಗೆಳೆಯ ಎಂದರೆ ಸಾಕ್ಷಿ ಪರಿಚಯದವರು ಎಂದು ನುಡಿಯುತ್ತಾರೆ. ಕಿತ್ತೂರ ಠಾಣೆಗೆ ಸಂಬಂಧಪಟ್ಟಂತೆ ಎಂ.ಕೆ.ಹುಬ್ಬಳ್ಳಿಯಲ್ಲಿ ಇರುವ ಚೆಕ್ ಪೋಸ್ಟನಲ್ಲಿ ಗಿರಿಯಾಲ ಎಂಬುವವರು ನನ್ನ ಸಂಬಂಧಿ ಎಂದರೆ ಸರಿ. ಚೇತನ ಬದನಿ ಹಾಗೂ ಗಿರಿಯಾಲ ಅವರು ನನ್ನ ತಮ್ಮನ ಕಡೆಯಿಂದ ಈ ದೂರು ಬರೆಸಿಕೊಂಡಿದ್ದಾರೆ ಎಂದರೆ ಸಾಕ್ಷಿ ಚೇತನ ಬದನಿ ಅವರು ದೂರು ತೆಗೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

23. ನನ್ನ ತಮ್ಮ ದೂರು ಕೊಡಲು ಠಾಣೆಗೆ ಹೋದಾಗ ನಾನು ಸಹ ಆತನ ಜೊತೆ ಹೋಗಿದ್ದೆ. ಸದರಿ ಸಮಯದಲ್ಲಿ ಆರೋಪಿತರು ಠಾಣೆಯಲ್ಲಿ ಇದ್ದರಾ ಎಂದರೆ ಸಾಕ್ಷಿ ಒಬ್ಬ ಆರೋಪಿ ಇದ್ದರು, ಹಾಗಾಗೀ ನಾವು ದೂರು ಕೊಡಲು ಹೋದೆವು ಎಂದು ನುಡಿಯುತ್ತಾರೆ. ಆರೋಪಿತರ ಪೂರ್ತಿ ಹೆಸರು ಮತ್ತು ವಿಳಾಸ ಹೇಳಲು ಆಗುವುದಿಲ್ಲ ಎಂದರೆ ಸಾಕ್ಷಿ ನನಗೆ ಆರೋಪಿಗಳ ಅಡ್ಡ ಹೆಸರು ಹೇಳಬಲ್ಲೆ ಎಂದು ನುಡಿಯುತ್ತಾರೆ. 6 ಜನ ಆರೋಪಿತರ ಅಡ್ಡ ಹೆಸರು ಹೇಳಲು ಬರುವುದಿಲ್ಲ ಎಂದರೆ ಸರಿ. ಪೊಲೀಸರಿಗೆ

ಹೇಳಿಕೆ ಕೊಡುವ ಕಾಲಕ್ಕೆ ಮತ್ತು ಮುಖ್ಯ ವಿಚಾರಣೆ ಸಾಕ್ಷಿ ಕಾಲಕ್ಕೆ 6 ಜನ ಆರೋಪಿತರ ಹೆಸರು ಹೇಳಿಲ್ಲ ಎಂದರೆ ಸಾಕ್ಷಿ ಅಡ್ಡ ಹೆಸರು ಹೇಳಿದ್ದೇನೆ ಎನ್ನುತ್ತಾರೆ. ಪೊಲೀಸರಿಗೆ ಹೇಳಿಕೆ ಕೊಡುವ ಕಾಲಕ್ಕೆ ಆರೋಪಿತರ ಪೂರ್ತಿ ಹೆಸರು ಹೇಳಿಲ್ಲ ಎಂದರೆ ಸರಿ. ನಾನು ಠಾಣೆಗೆ ಹೋದಾಗ ಪೊಲೀಸರು ಆರೋಪಿಯನ್ನು ತೋರಿಸಿ ಸದರಿ ದರೋಡೆ ಇವರೇ ಮಾಡಿದ್ದರು ಎಂದು ಹೇಳಿದ್ದಕ್ಕೆ ಆ ರೀತಿ ಅವರನ್ನು ನಾನು ಗುರುತಿಸಿದ್ದೇನೆ ಎಂದರೆ ಸರಿ.

(ಈ ಹಂತದಲ್ಲಿ ಆರೋಪಿತರ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಅದೆ

4ನೇ ಅಧಿಕ ಸತ್ರ ನ್ಯಾಯಾಧೀಶರು ಹಾಗೂ ವಿಶೇಷ
ನ್ಯಾಯಾಧೀಶರು (ಪಿಸಿಎ) ಬೆಳಗಾವಿ.